# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 120/2018

**ಡಿ.ಡಬ್ಲ್ಯೂ: 1**

**ಸಾಕ್ಷಿಗೆ ದಿನಾಂಕ 12-05-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | : ಕೆ.ಧನಂಜಯ |
| ತಂದೆಯ ಹೆಸರು | : ಎ.ಎನ್.ಕದುರಪ್ಪ |
| ವಯಸ್ಸು | : 52 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ಜಾಫರ್ ಷರೀಫ್ ಲೇಔಟ್, ಹೊಸದುರ್ಗ |

**ಮುಖ್ಯ ವಿಚಾರಣೆ: ಆರೋಪಿ ಪರ ವಕೀಲರಾದ ಶ್ರೀ ಹೆಚ್.ಎಲ್.ಎನ್. ರವರಿಂದ**

1. ನಾನು 2012 ರಲ್ಲಿ ಪಿರ್ಯಾದುದಾರರ ಬ್ಯಾಂಕಿನಲ್ಲಿ ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದೆನು. ಅದರಂತೆ ನನಗೆ ರೂ.15,00,000/- ಗಳ ಸಾಲ ಮಂಜೂರು ಆಗಿತ್ತು. ಸಾಲದ ಅರ್ಜಿ ತುಂಬುವ ಸಮಯದಲ್ಲಿ ಸಾಲ ಮಂಜೂರು ಮಾಡಲು 4 ಖಾಲಿ ಚೆಕ್ಕುಗಳನ್ನು ನೀಡುವಂತೆ ಕೇಳಿದರು. ನಾನು ಕಾರಣ ಕೇಳಲು ಪಿರ್ಯಾದುದಾರರು ಖಾಸಗಿ ಬ್ಯಾಂಕ್ ಆಗಿದ್ದು ಅವರ ನಿಯಮಗಳ ಪ್ರಕಾರ ಮನೆಯ ಮೌಲ್ಯ ಮಾಡಿಸುವ ಸಲುವಾಗಿ ಹಾಗೂ ಇತರ ಕ್ರಮಗಳಿಗಾಗಿ ಚೆಕ್ಕುಗಳು ಬೇಕಾಗಿರುವುದಾಗಿ ಹೇಳಿದ್ದು, ಅದರಂತೆ ನಾನು 4 ಖಾಲಿ ಚೆಕ್ಕುಗಳನ್ನು 2012 ರಲ್ಲಿ ನೀಡಿರುತ್ತೇನೆ. ಯಾವುದೇ ಬರವಣಿಗೆ ನಾನು ಬರೆದಿರುವುದಿಲ್ಲ. 2012 ರಲ್ಲೇ ನಾನು ಸಾಲ ತೀರುವಳಿ ಮಾಡಿದ್ದು ನನ್ನ ಖಾತೆಯಿಂದ ಪಿರ್ಯಾದುದಾರ ಬ್ಯಾಂಕಿನವರು ರೂ.28,00,000/- ಗಳನ್ನು ಜಮಾ ಮಾಡಿಕೊಂಡಿರುತ್ತಾರೆ. ಹೆಚ್ಚುವರಿಯಾಗಿ 2013 ರಲ್ಲಿ ರೂ.2,80,000/- ಗಳನ್ನು ನನ್ನಿಂದ ಕಟ್ಟಿಸಿಕೊಂಡಿರುತ್ತಾರೆ.

2. ನಾನು ಸದರಿ ಮೊತ್ತ ಜಮಾ ಆದ ಬಗ್ಗೆ ಬ್ಯಾಂಕಿನವರಿಗೆ ಕೇಳಿದಾಗ ನ್ಯಾಯಾಲಯದಲ್ಲಿ ಪ್ರಕರಣ ಇರುವ ಕಾರಣ ದಾಖಲೆ ನೀಡಲು ಬರುವುದಿಲ್ಲ ಎಂದು ನನಗೆ ತಿಳಿಸಿರುತ್ತಾರೆ. ಬ್ಯಾಂಕಿನವರ ಆಡಿಟ್ ವರದಿಯಲ್ಲಿ ರೂ.28,00,000/- ಗಳು ನಮೂದು ಇರುತ್ತದೆ ನನಗೆ ತಿಳಿಸಿರುತ್ತಾರೆ. ಪ್ರಕರಣದ ಬಗ್ಗೆ ನನಗೆ ಬ್ಯಾಂಕಿನಿಂದ ಯಾವುದೇ ನೋಟೀಸು ಬಂದಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ನನ್ನ ಸ್ನೇಹಿತರೊಂದಿಗೆ ಬೇರೆ ಕೆಲಸದ ನಿಮಿತ್ತ ಬಂದಾಗ ಪ್ರಕರಣದ ನೋಟೀಸನ್ನು ನೀಡಿ ನನ್ನ ಸಹಿ ಪಡೆದಿರುತ್ತಾರೆ. ನಾನು ಪಡೆದ ಸಾಲದ ಬಾಬ್ತು ಪಿರ್ಯಾದುದಾರ ಬ್ಯಾಂಕಿನವರಿಗೆ ಯಾವುದೇ ಹಣ ಪಾವತಿ ಮಾಡುವ ಬಾಧ್ಯತೆ ಇರುವುದಿಲ್ಲ. ಆದಕಾರಣ ನನ್ನ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡಿರುವ ಪಿರ್ಯಾದುದಾರರ ಈ ಪ್ರಕರಣವನ್ನು ರದ್ದು ಮಾಡಿ ನನ್ನನ್ನು ಬಿಡುಗಡೆ ಮಾಡಬೇಕಾಗಿ ನಾನು ಕೇಳಿಕೊಳ್ಳುತ್ತೇನೆ.

ಗುರುತಿಸಿಕೊಳ್ಳಲು ಯಾವುದೇ ದಾಖಲಾತಿಗಳು ಇರುವುದಿಲ್ಲ.

## ಪಾಟೀ ಸವಾಲುಃ

ಪಿರ್ಯಾದುದಾರರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಅದೆ.**

**(ಪ್ರಸನ್ನಕುಮಾರ್ ಸಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆ ಎಂ ಎಫ್ ಸಿ**
**ನ್ಯಾಯಾಲಯ,ಹೊಸದುರ್ಗ.**